

**ಮಕ್ಕಳಲ್ಲಿನ ಅಭಿನಯ ಚಾತುರ್ಯದ ಅನಾವರಣಕ್ಕೆ ವೇದಿಕೆ ಕಲ್ಪಿಸುತ್ತಿರುವ ಕಿರುತೆರೆಯ 'ಡ್ರಾಮಾ ಜೂನಿಯರ್ಸ್' ಕಾರ್ಯಕ್ರಮ, ಪಠ್ಯಗಳನ್ನು ನಾಟಕಕ್ಕೆ ಒಗ್ಗಿಸುವ ಮೂಲಕ ಮನರಂಜನಾ ಕಾರ್ಯಕ್ರಮಕ್ಕೆ ತರಗತಿಯ ರೂಪವನ್ನು ನೀಡಿದೆ.**

■ ಗುರು ಪಿ.ಎಸ್.

ಎಂಬುದನ್ನು ಮಕ್ಕಳು ಇಲ್ಲಿ ಕಲಿಯುತ್ತಿದ್ದಾರೆ. ಒಂದು ರೀತಿಯಲ್ಲಿ ಮಕ್ಕಳಿಗೆ ಗುರುಕುಲ ಮಾದರಿಯ ಶಿಕ್ಷಣ ಇಲ್ಲಿ ದೊರೆಯುತ್ತಿದೆ' ಎಂದು ಶರಣಯ್ಯ ಹೇಳುತ್ತಾರೆ.

ಕಾರ್ಯಕ್ರಮದಲ್ಲಿ ಪಾಲ್ಗೊಂಡಿರುವ ಬಹುತೇಕ ಮಕ್ಕಳಿಗೆ ಕನ್ನಡ ಓದಲು ಬರುವುದಿಲ್ಲ. ಆದರೆ, ನುರಿತ ನಟರನ್ನೂ ಮೀರಿಸುವಂತೆ ಕನ್ನಡದಲ್ಲಿ ಸ್ಫುಟವಾಗಿ ಸಂಭಾಷಣೆ ದಾಟಿಸುತ್ತಾರೆ. ಉಚ್ಚಾರದಲ್ಲಿ ಸ್ಪಷ್ಟತೆ, ಧ್ವನಿಯಲ್ಲಿ ಏರಿಳಿತ, ಅಭಿನಯದಲ್ಲಿ ಪ್ರೌಢಿಮೆಯನ್ನು ಪ್ರದರ್ಶಿಸುತ್ತಿದ್ದಾರೆ. ಇದಕ್ಕೆ ಕಾರಣ, ಮಕ್ಕಳಿಗೆ ಅಭಿನಯ ಕಲೆ ಹೇಳಿಕೊಡುತ್ತಿರುವ ತಂಡ. ನಿರ್ವಹಿಸುವ ಪಾತ್ರ, ಅದರ ಹಿನ್ನೆಲೆಯನ್ನು ಮಕ್ಕಳಿಗೆ ಮೊದಲು ತಿಳಿಸಿಕೊಡಲಾಗುತ್ತದೆ. ಕನ್ನಡ ಓದಲು, ಬರೆಯಲು ಬಾರದಿದ್ದರೂ, ಮಕ್ಕಳಿಗೆ ನಟನೆ ಕಷ್ಟವಾಗುತ್ತಿಲ್ಲ. ಹೀಗಾಗಿಯೇ, ಶಬರಿ, ಹೂವಾದ ಹುಡುಗಿ, ಭೂಮಿಗಿಳಿದ ಬೃಹಸ್ಪತಿಯಂತಹ ಗದ್ಯಗಳು ದೃಶ್ಯರೂಪ ಪಡೆದುಕೊಂಡು ಯಶಸ್ವಿಯಾಗಿ ಪ್ರದರ್ಶಿತಗೊಂಡವು.

### ಶಾಲೆಗಳಲ್ಲಿ ಸಾಧ್ಯವಾಗುತ್ತಿಲ್ಲವೇಕೆ ?

ಮಕ್ಕಳಲ್ಲಿ ಅಭಿನಯ ಕುರಿತು ಆಸಕ್ತಿ ಮೂಡಿಸುವುದು, ಅವರಲ್ಲಿನ ನಟನಾ ಪ್ರತಿಭೆಗೆ ವೇದಿಕೆ ಕಲ್ಪಿಸಲು ಶಾಲೆಗಳಲ್ಲಿ ಸಾಧ್ಯವಾಗುತ್ತಿಲ್ಲವೇಕೆ ಎಂಬ ಪ್ರಶ್ನೆ ಮೂಡುತ್ತದೆ. ಒಂದು ವಾಹಿನಿಗೆ ಸಾಧ್ಯವಾಗುವುದು, ಶಾಲಾ ಶಿಕ್ಷಕರಿಗೆ ಆಗುತ್ತಿಲ್ಲವೇಕೆ ಎನ್ನುವ ಪ್ರಶ್ನೆಗೆ ಭಿನ್ನ ಉತ್ತರಗಳು ತೆರೆದುಕೊಳ್ಳುತ್ತವೆ. ಪಾಠ ಮಾಡುವುದಕ್ಕೇ ಸಮಯವಿಲ್ಲ, ಇದನ್ನೆಲ್ಲ ಮಾಡುವುದು ಹೇಗೆ ಎಂದು ಕೆಲವು ಶಿಕ್ಷಕರು ಪ್ರಶ್ನಿಸಿದರೆ, ಇರುವ ಸೀಮಿತ ಅವಕಾಶದಲ್ಲಿಯೇ ನಾವು ನಾಟಕ ಕಲೆ ಹೇಳಿಕೊಡುತ್ತಿದ್ದೇವೆ. ಆದರೆ, ಅದು ಬೆಳಕಿಗೆ ಬರುತ್ತಿಲ್ಲವಷ್ಟೇ ಎಂದು ಕೆಲವು ಶಿಕ್ಷಕರು ಹೇಳುತ್ತಾರೆ.

'ಶಾಲೆಯಲ್ಲಿ ಮಕ್ಕಳಿಂದ ಈವರೆಗೆ ದೊಡ್ಡ ಮಟ್ಟದಲ್ಲಿ ನಾಟಕ ಮಾಡಿಸಿಲ್ಲ. ಆದರೆ, ಕನ್ನಡ ಶಿಕ್ಷಕರು ಗದ್ಯವನ್ನು ಜೋರಾಗಿ ಓದಿಸುವುದರ ಮೂಲಕ ಉಚ್ಚಾರ ಸ್ಪಷ್ಟತೆ ಹೇಳಿಕೊಡುತ್ತಿದ್ದಾರೆ. ಮಕ್ಕಳಲ್ಲಿ ನಟನಾ ಕಲೆ ಉತ್ತೇಜಿಸುವುದಕ್ಕೆ ಗಮನ ಕೊಡಲಾಗುವುದು' ಎನ್ನುತ್ತಾರೆ ಹುಬ್ಬಳ್ಳಿ ವಿಶ್ವೇಶ್ವರನಗರ ಸರ್ಕಾರಿ ಪ್ರೌಢಶಾಲೆಯ ಮುಖ್ಯಶಿಕ್ಷಕಿ ಡಿ.ಜಿ. ಕಮ್ಮಾರ.

'ಎಲ್ಲ ಮಕ್ಕಳೂ ಓದುವುದರಲ್ಲಿ ಮುಂದಿರುವುದಿಲ್ಲ. ಆದರೆ, ಅಭಿನಯದಲ್ಲಿ ಹೆಚ್ಚು ಆಸಕ್ತಿ ಹೊಂದಿರುತ್ತಾರೆ. ಸಂಭಾಷಣೆ, ಪದ್ಯಗಳನ್ನು ಚೆನ್ನಾಗಿ ಹೇಳುತ್ತಿರುತ್ತಾರೆ. ಅಂಥವರನ್ನು ಗುರುತಿಸಿ, ಅವರಲ್ಲಿನ ಪ್ರತಿಭಾ ಪ್ರದರ್ಶನಕ್ಕೆ ವೇದಿಕೆ ಒದಗಿಸಲಾಗುವುದು' ಎಂದು ಅವರು ಹೇಳಿದರು.

'ವಾಹಿನಿಗಳಂತೆ ಗದ್ಯಗಳನ್ನು ಆಕರ್ಷಕವಾಗಿ ನಾಟಕ ರೂಪಕ್ಕೆ ಇಳಿಸಿ ಪ್ರದರ್ಶಿಸವುದು ಶಾಲೆಗಳಲ್ಲಿ ಕಷ್ಟವಾಗುತ್ತದೆ. ಸಂಗೀತ ಪರಿಕರಗಳು, ತಜ್ಞರ ಕೊರತೆ ಅದಕ್ಕೆ ಕಾರಣ. ಸೀಮಿತ ಅವಧಿಯಲ್ಲಿ ಮಕ್ಕಳಿಗೆ ಎಷ್ಟು ಕಲಿಸಲಾಗುತ್ತದೆಯೋ ಅಷ್ಟನ್ನು ಮಾಡುತ್ತಿದ್ದೇವೆ' ಎನ್ನುತ್ತಾರೆ ಕನ್ನಡ ಶಿಕ್ಷಕಿ ಎಚ್. ಆರ್. ಕುಲಕರ್ಣಿ.

'ಓದುವುದಕ್ಕೆ, ಬರೆಯುವುದಕ್ಕೆ ಹೆಚ್ಚು ಆದ್ಯತೆ ನೀಡಿದ್ದೆವು. ನಾಟಕ ಕಲೆಗೂ ಪ್ರೋತ್ಸಾಹ ನೀಡುತ್ತೇವೆ' ಎಂದು ಅವರು ಹೇಳುತ್ತಾರೆ.

## ಅಂಕಗಳೂ ಉಂಟು!

**ಕನ್ನಡ ಮತ್ತು ಇಂಗ್ಲಿಷ್‌ನಲ್ಲಿ ಸಂಭಾಷಣೆ ಬರಹ ಮತ್ತು ವಾಚನಕ್ಕೆ ಐದು ಅಂಕಗಳೂ ಇವೆ. 80 ಅಂಕಗಳಿಗೆ ಮುಖ್ಯಪರೀಕ್ಷೆ ನಡೆದರೆ, ಉಳಿದ 20 ಆಂತರಿಕ ಅಂಕಗಳ ರೂಪದಲ್ಲಿ ನೀಡಲಾಗುತ್ತದೆ. ಸಂಭಾಷಣೆ ಬರಹಕ್ಕೆ ನೀಡುವ ಅಂಕಗಳು ಕೂಡ ಫಲಿತಾಂಶದ ವೇಳೆ ಪರಿಗಣಿಸಲಾಗುತ್ತದೆ. ಹೀಗಾಗಿ, ಮಕ್ಕಳಿಗೆ ನಾಟಕ ಕಲೆಯು ಮಕ್ಕಳಿಗೆ ಮನರಂಜನೆಯ ಜೊತೆಗೆ, ಅಂಕಗಳನ್ನೂ ತಂದುಕೊಡುತ್ತದೆ. ಆದರೆ, ಕನ್ನಡ ಶಿಕ್ಷಕರು ಈ ನಿಟ್ಟಿನಲ್ಲಿ ಹೆಚ್ಚು ಕ್ರಿಯಾಶೀಲರಾಗಬೇಕಿದೆ.**

### ಶಾಲೆಗಳಲ್ಲಿ ಏನು ಮಾಡಬೇಕು ?

- ಮಕ್ಕಳಿಂದ ನಾಟಕ ಪ್ರದರ್ಶನ ಮಾಡಿಸಬೇಕೆಂದರೆ ಸಂಗೀತ ಪರಿಕರಗಳು ಹಾಗೂ ಸಂಪನ್ಮೂಲ ಇರಲೇಬೇಕೆಂದಿಲ್ಲ. ಒಬ್ಬೊಬ್ಬ ವಿದ್ಯಾರ್ಥಿಗೆ ಒಂದೊಂದು ಪಾತ್ರ ಕೊಟ್ಟು, ಸಂಭಾಷಣೆ ಅಭ್ಯಾಸ ಮಾಡಿಸಿದರೂ ಮಕ್ಕಳಿಗೆ ಪ್ರೋತ್ಸಾಹ ನೀಡಿದಂತಾಗುತ್ತದೆ.
- ಪ್ರತಿ ಶಾಲೆಯಲ್ಲಿ ಅಥವಾ ನಾಲ್ಕರಿಂದ ಐದು ಶಾಲೆಗಳಿಗೆ ಒಬ್ಬ ರಂಗಭೂಮಿ ಶಿಕ್ಷಕರನ್ನು ನೇಮಕ ಮಾಡಬೇಕು.
- ನಿಯಮಿತವಾಗಿ ಮಕ್ಕಳಲ್ಲಿ ನಾಟಕ ಸ್ಪರ್ಧೆ ಏರ್ಪಡಿಸಬೇಕು
- ಅಭಿನಯದಲ್ಲಿ ಆಸಕ್ತಿ ಹೊಂದಿರುವ ಮಕ್ಕಳ ಪೋಷಕರ ಜತೆ ಸಭೆ ಮಾಡಬೇಕು. ಮಕ್ಕಳು–ಪೋಷಕರಲ್ಲಿನ ಕೀಳರಿಮೆ ಹೋಗಲಾಡಿಸಬೇಕು.

'ರಾಜ್ಯದ ಯಾವುದೇ ಭಾಗದಿಂದ, ಯಾವುದೇ ಶಾಲೆಯವರು ಕೇಳಿದರೂ, ನಾವು ನಮ್ಮ ಸ್ಕ್ರಿಪ್ಟ್ ಅನ್ನು ಕಳಿಸುತ್ತೇವೆ. ಸಾಧ್ಯವಾದರೆ ಸರ್ಕಾರಿ ಶಾಲೆಗಳಿಗೆ ನಮ್ಮ ತಂಡ ಭೇಟಿ ನೀಡಿ ಮಕ್ಕಳಿಗೆ ನಾಟಕ ಕಲಿಸಿ ಬರಲೂ ಸಿದ್ಧವಿದೆ. ಡ್ರಾಮಾ ಜೂನಿಯರ್‌ನಲ್ಲಿ ಅಭಿನಯಿಸಲಾದ ಗದ್ಯ ಆಧಾರಿತ ನಾಟಕದ ಸ್ಕ್ರಿಪ್ಟ್ ಬೇಕಾದವರುವಾಹಿನಿಯನ್ನು ಸಂಪರ್ಕಿಸಬಹುದು' (78293–96111) ಎನ್ನುತ್ತಾರೆ ಶರಣಯ್ಯ. ■